**ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರು**

3460- ಶ್ರೀ ಎಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು?*

*ಆ) ಅವರುಗಳನ್ನು ಖಾಯಂಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

*ಇ) ಮುದ್ರಣಾಲಯದಲ್ಲಿ ಸಾಕಷ್ಟು ನೌಕರರು ಇದ್ದರೂ ಸಹ ಮುದ್ರಣಾಲಯದ ಕಾರ್ಯವನ್ನು ಖಾಸಗಿ ಮುದ್ರಣಾಲಯದಲ್ಲಿ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಹಾಗಿದ್ದಲ್ಲಿ, ಅದನ್ನು ತಡೆಗಟ್ಟಿ ಅದರಿಂದ ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ತಪ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣಸಚಿವರು).

ಅ) 471.

ಆ) ಪರಿಶೀಲನೆಯಲ್ಲಿದೆ.

ಇ) ಮುದ್ರಣಾಲಯದ ಕಾರ್ಯಗಳನ್ನು ಖಾಸಗಿ ಮುದ್ರಣಾಲಯಗಳಿಗೆ ವಹಿಸುತ್ತಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ 471 ದಿನಗೂಲಿ ನೌಕರರು ಗವರ್ನಮೆಂಟ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಜೊತೆಗೆ ಅವರನ್ನು ಖಾಯಂಗೊಳಿಸುವ ಬಗ್ಗೆ 'ಪರಿಶೀಲಿಸಲಾಗುವುದು' ಎಂದು ಹೇಳುತ್ತಾರೆ. ಆದರೆ 1983ರಿಂದ ಈಚೆಗೆ ಯಾರು ಈ ಹಿಂದೆ ಕೆಲಸ ಮಾಡುತ್ತಿದ್ದರು. ಅವರನ್ನೆಲ್ಲಾ ಖಾಯಂ ಮಾಡಬೇಕೆಂದು ಸುಪ್ರೀಂ ಕೋರ್ಟಿನಿಂದ ಆದೇಶ ಬಂದಮೇಲೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದಾರೆ. ಆದರೆ ಗವರ್ನಮೆಂಟ್ ಪ್ರೆಸ್‌ನಲ್ಲಿ ಹಾಗೆ ಮಾಡಿದ್ದಾರೆಯೇ ಎಂದು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ) : ಈ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ ಶೀಘ್ರದಲ್ಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ ಸರ್ಕಾರಿ ಮುದ್ರಣಾಲಯ ದೊಡ್ಡ ಪ್ರಮಾಣದಲ್ಲಿ ಇದ್ದರೂ ಕೂಡ ಖಾಸಗಿಯವರಿಂದ ಪ್ರಿಂಟಿಂಗ್ ವರ್ಕ್ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಜೊತೆಗೆ ಪಠ್ಯಪುಸ್ತಕದ ಕೆಲಸ ಕೂಡ ಅವರು ಸಮರ್ಪಕವಾಗಿ ಮಾಡುತ್ತಿಲ್ಲ. ಇವತ್ತಿನ ದಿವಸ ಸರ್ಕಾರಿ ಪಾಠ ಶಾಲೆಗಳಿಗೆ ಸರಿಯಾದಂತಹ ಪುಸ್ತಕ ಸಹ ಬರುತ್ತಿಲ್ಲ ಜೊತೆಗೆ ಎಷ್ಟು ಪುಸ್ತಕಗಳು ಪ್ರಿಂಟ್ ಆಗುತ್ತವೆ ಎಂದು ಬೇರೆ ಪುಸ್ತಕಗಳ ಕವರ್ ಮೇಲೆ ಇಷ್ಟು ಪ್ರತಿಗಳು ಅಂತ ಪ್ರಿಂಟ್ ಆಗಿ ಬರುತ್ತದೆ. ಆದರೆ ಸರ್ಕಾರಿ ಮುದ್ರಣಾಲಯದಿಂದ ಬರತಕ್ಕಂಥ ಪುಸ್ತಕಗಳಲ್ಲಿ ಇದು ಬರುತ್ತಿಲ್ಲ ಇದರಲ್ಲಿ ಅವ್ಯವಹಾರ ಏನಾದರೂ ಆಗಿದ್ದರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ ಮುದ್ರಣ ಕೆಲಸವನ್ನು ಖಾಸಗಿಯವರಿಗೆ ಯಾವ ಸಂದರ್ಭದಲ್ಲೂ ಕೂಡ ವಹಿಸಿಲ್ಲ, ಎಲ್ಲಾ ಕಾರ್ಯಗಳು ಕೂಡ ಸರ್ಕಾರಿ ಮುದ್ರಣಾಲಯವೇ ನಿರ್ವಹಿಸುತ್ತಿದೆ ಮತ್ತು ಮುದ್ರಣಾಲಯದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಮತ್ತು ಪಠ್ಯಪುಸ್ತಕಗಳು ಕೂಡ ಸರಿಯಾಗಿ ಒದಗಿಸತಕ್ಕಂಥಾದ್ದಕ್ಕೆ ಎಲ್ಲಾ ರೀತಿಯ ಕ್ರಮ ತೆಗೆದು ಕೊಂಡಿದ್ದೇವೆ. ಅದರಂತೆ ಕೆಲಸ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

**ಕೆ.ಎಸ್.ಇ.ಇ.ಬಿ. ಅವರು 91ರ ಜುಲೈರಂದು ನಡೆಸಿದ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆ**

3311- ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) 1991ನೆಯ ಜುಲೈ ತಿಂಗಳಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರುತ್ತಾರೆ?*

*ಆ) ಇದರಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಕನ್ನಡ ಪ್ರೌಢ ದರ್ಜೆ ಪರೀಕ್ಷೆಯ ಮೊದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುತ್ತಾರೆ?*

*ಇ) ಕನ್ನಡ ಬೆರಳಚ್ಚು ಪ್ರೌಢದರ್ಜೆ ಮೊದಲನೆಯ ಪತ್ರಿಕೆಯಲ್ಲಿ ಬಹಳ ಮಂದಿ ವಿದ್ಯಾರ್ಥಿಗಳು ಮನಸೋ ಇಚ್ಛೆ ಮೌಲ್ಯ ಮಾಪನ ಮಾಡದಿರುವುದರಿಂದ ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಮರು ಎಣಿಕೆಗೆ ಕನ್ನಡ ಪ್ರೌಢ ದರ್ಜೆಯ ಎಷ್ಟು ವಿದ್ಯಾರ್ಥಿಗಳು ಅರ್ಜಿ ಹಾಕಿರುತ್ತಾರೆ?*

*ಉ) ಮೌಲ್ಯಮಾಪನ ಮನಸೋ ಇಚ್ಛೆ ಆಗಿರುವುದರಿಂದ ಸರ್ಕಾರವು ಮರು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಲು ಕ್ರಮ ತೆಗೆದುಕೊಳ್ಳುವುದೇ?*

*ಊ) ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಮೆದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುವುದಕ್ಕೆ ಕಾರಣರಾದ ಮೌಲ್ಯಮಾಪಕರನ್ನು ಮೌಲ್ಯಮಾಪಕರ ಕೆಲಸದಿಂದ ವಜಾ ಮಾಡಲು ಸರ್ಕಾರ ಕ್ರಮ ತೆಗೆದು ಕೊಳ್ಳುವುದೆ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) 8613 ವಿದ್ಯಾರ್ಥಿಗಳು.

ಆ) 2,176.

ಇ) ಇಲ್ಲ.

ಈ) 61 ವಿದ್ಯಾರ್ಥಿಗಳು.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಸೀನಿಯರ್ ಕನ್ನಡ ಟೈಪರೇಟಿಂಗ್ ಪರೀಕ್ಷೆ ಜುಲೈ 1991ರಲ್ಲಿ ಆಯಿತು ಅದನ್ನು ಕೆ.ಎಸ್.ಎಸ್.ಇ.ಬಿ. ವತಿಯಿಂದ ನಡೆಸುತ್ತಾರೆ. ಇದರಲ್ಲಿ ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ ಅಲ್ಲಿ ವ್ಯಾಲುವೇಶನ್ ಮಾಡುವವರು ಯಾರು? ಯಾರನ್ನು ನೇಮಿಸುತ್ತಾರೆ. ಎರಡನೆಯದಾಗಿ ಸೀನಿಯರ್ ಗ್ರೇಡ್ ಕನ್ನಡ ಟೈಪರೇಟಿಂಗ್ ಪಾರ್ಟ್ 1ರಲ್ಲಿ ಮಾರ್ಕ್ಸ್ ಕೊಡುವಾಗ ಸರಿಯಾಗಿ ಮಾರ್ಕ್ಸ್ ಪರೀಕ್ಷೆಯಲ್ಲಿ ಕೊಟ್ಟಿಲ್ಲ ಎನ್ನುವ ದೂರು